**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ -7

ಪಿ ಡಬ್ಲ್ಯೂ-7

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೇವಿಂದ್ರಪ್ಪ |
| **ತಂದೆ/ಗಂಡನ ಹೆಸರು** | : | ಉಚ್ಚಪ್ಪ |
| **ವಯಸ್ಸು** | : | 60 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಹುಲ್ಲತ್ತಿ |

**ದಿನಾಂಕಃ 09-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು 3 ವರ್ಷದ ಹಿಂದೆ ರಾಣೇಬೆನ್ನೂರಿನ ಕೆ ಎಫ್ ಸಿ ಎಫ್ ಗೋಡಾನ್ ನಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದಾಗ ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ಒಂದು ಲಾರಿಯಲ್ಲಿ 335 ಅಕ್ಕಿ ಚೀಲಗಳನ್ನು ಲಾರಿಯಿಂದ ಕೆಳಗೆ ಇಳಿಸಲು ನನ್ನನ್ನು ಹಾಗೂ ಇನ್ನಿತರ ಕೆ ಎಫ್ ಸಿ ಎಫ್ ಹಮಾಲರಾದ ಚಾಸಾ-6,8,9,10 ರವರನ್ನು ಕರೆದರು. ಸದರಿ ಚೀಲವನ್ನು ಆರೋಪಿತ ಕಳುವು ಮಾಡಿಕೊಂಡು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದನು ಎಂದು ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ತಿಳಿಸಿದರು. ಸದರಿ ಚೀಲಗಳು 50 ಕೆಜಿಯ ಒಟ್ಟು 335 ಚೀಲಗಳು ಇದ್ದವು. ಆಗ ನಾವು ಅಕ್ಕಿ ಚೀಲಗಳನ್ನು ಕೆಳಗೆ ಇಳಿಸಿರುತ್ತೇವೆ. ಆಗ ನ್ಯಾಯಾಲಯದ ಮುಂದಿರುವ ಆರೋಪಿತ ಸ್ಥಳದಲ್ಲಿದ್ದರು. ಸದರಿ ಅಕ್ಕಿ ಕಳ್ಳತನದಿಂದ ತೆಗೆದುಕೊಂಡು ಬಂದ ಅಕ್ಕಿ ಎಂದು ಹೇಳಿರುತ್ತಾರೆ. ಆಗ ಸಮಯ ಮದ್ಯಾಹ್ನ 02.30 ಯಿಂದ 03.00 ಗಂಟೆಯಾಗಿತ್ತು. ಸದರಿ ಅಕ್ಕಿ ಚೀಲಗಳನ್ನು ಗೋಡಾನ್ ನಲ್ಲಿ ಇಳಿಸಿರುತ್ತೇವೆ. ನಾನು ಆಹಾರ ನೀರಿಕ್ಷಕರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಕೆ ಎಫ್ ಸಿ ಎಸ್ ಗೋಡಾನ್ ನಲ್ಲಿ ಖಾಯಂ ಆಗಿ ಹಮಾಲಿಯಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಚಾಸಾ-1 ರಿಂದ 4 ರವರು ಸದರಿ ಲಾರಿಯನ್ನು ಸದರಿ ಗೋಡಾನ್

ಸಿ ಡಬ್ಲ್ಯೂ -7

ಪಿ ಡಬ್ಲ್ಯೂ-7

ತಂದು ನನಗೆ ಹಾಗೂ ಇತರ ಹಮಾಲರಿಗೆ ಸದರಿ ಅಕ್ಕಿ ಚೀಲಗಳನ್ನು ಇಳಿಸಲು ಹೇಳಿರುತ್ತಾರೆ ಎಂದರೆ ನಿಜ. ಆಗ ಆರೋಪಿತ ಸದರಿ ಗೋಡಾನ್ ನಲ್ಲಿದ್ದರು ಎಂದರೆ ಸರಿ. ಆರೋಪಿತ ಆ ಸಮಯದಲ್ಲಿ ಅಕ್ಕಿ ಚೀಲಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್ಲನ್ನು ಆಹಾರ ನೀರಿಕ್ಷಕರಿಗೆ ತೋರಿಸುತ್ತಿದ್ದರು ಎಂದರೆ ನನಗೆ ಎಂಥವು ಎಂದು ನನಗೆ ಗೊತ್ತಿಲ್ಲ ಕಾಗದಗಳನ್ನು ತೋರಿಸುತ್ತಿದ್ದರು. ಆಹಾರ ನೀರಿಕ್ಷಕರು ಆರೋಪಿಯನ್ನು ಎನು ಕೇಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಗೋಡಾನ್ ಮ್ಯಾನೇಜರ್ ಗೆ ಸದರಿ ಕಾಗದಗಳನ್ನು ಆರೋಪಿತ ತೋರಿಸುತ್ತಿದ್ದ ಎಂದರೆ ಸರಿ. ಸದರಿ ಲಾರಿಯ ಜೊತೆ ಆರೋಪಿತ ಹಾಗೂ ಅಧಿಕಾರಿಗಳು ಮತ್ತು ಪೋಲಿಸರು ಬಂದಿದ್ದರು ಎಂದರೆ ನಿಜ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.